ಓ.ಎಸ್. ನಂ. 26/2016
ಪಿ.ಡಬ್ಲ್ಯೂ- 2

(ಇಂದು ದಿಃ 28-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಪಾಟೀ ಸವಾಲು **:-1, 2** ಮತ್ತು **4** ನೇ ಪ್ರತಿವಾದಿಗಳ ಪರ ಶ್ರೀ **N.R.** ವಕೀಲರಿಂದ **:-**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕೊಡ್ಲಾದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಹುಟ್ಟಿನಿಂದ ಕೊಡ್ಲಾದಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕಳೆದ 55 ವರ್ಷಗಳಿಂದ ಮಹಾರಾಷ್ಟ್ರದಲ್ಲಿ ವಾಸ ಇದ್ದೇನೆ ಎಂದು ಹೇಳುತ್ತಾರೆ. ನಾನು ಗೌಂಡಿ ಕೆಲಸ ಮಾಡುತ್ತೇನೆ. ನನ್ನ ಮಹಾರಾಷ್ಟ್ರ ವಿಳಾದಲ್ಲಿ ನನ್ನ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಇದೆ. ಅವುಗಳನ್ನು ಹಾಜರುಪಡಿಸಿಲ್ಲ. ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಜಮೀನು ಮುಂಚೆ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಸಿದ್ದಣ್ಣ. ನನ್ನ ತಾತನ ಹೆಸರು ಸಾಬಣ್ಣ. ಸಾಬಣ್ಣ ತಂದೆ ಹೆಸರು ದುರ್ಗಣ್ಣ.

ಸರ್ವೆ ನಂ. 752 1983 ರಲ್ಲಿ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ನನ್ನ ತಾತ ಸಾಬಣ್ಣ ತಂದೆ ದುರ್ಗಣ್ಣ ರವರ ಹೆಸರಿನಲ್ಲಿ ದಾವಾ ಜಮೀನು ಯಾವತ್ತು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಈ ದಾವೆಯಲ್ಲಿ ಸರ್ವೆ ನಂ. 752/1 ರ ಜಮೀನು ಮುಂಚೆ ಸಾಬಣ್ಣ ತಂದೆ ಕಾಶಪ್ಪ ರವರಿಗೆ ಸೇರಿತ್ತು ಎಂದು ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಾಶಪ್ಪ ನನ್ನ ತಂದೆ ಎಂದು ನನ್ನ ತಂದೆ ಹೇಳಿ ಬರೆಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಬಸಮ್ಮ ಎಂದು ನನ್ನ ತಂದೆ ಹೇಳಿ ಬರೆಸಿದ್ದಾರೆ ಎಂದರೆ ಸರಿ. ನನ್ನ ತಂದೆಯ ತಾಯಿಯ ಹೆಸರು ಬಸಮ್ಮ.

ದಾವಾ ಜಮೀನು ಮಾಲಿಕರಾಗಿದ್ದ ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಕ ರವರಿಂದ ದಾವಾ ಸ್ವತ್ತನ್ನು ಪರ್ವತ ರೆಡ್ಡಿ ರವರ ತಂದೆಯಾದ ತಿಪ್ಪಣ್ಣ ಖರೀದಿ ಮಾಡಿದ್ದು ಅಂದಿನಿಂದ ದಾವಾ ಸ್ವತಿನಲ್ಲಿ ಮಾಲಿಕರಾಗಿ ಅವರೇ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಎಲ್ಲರಿಗೂ ಗೊತ್ತಿರುವಂತೆ ತಿಪ್ಪಣ್ಣ ದಾವಾ ಸ್ವತ್ತಿನಲ್ಲಿ ಸ್ವಾಧಿನದಲ್ಲಿದ್ದು ಆಮೂಲಕ ದಾವಾ ಸ್ವತ್ತಿನ ಮಾಲಿಕರಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಾಬಣ್ಣ ತಂದೆ ಕಾಶಪ್ಪ ರವರಿಗೆ ಈ ಹಿಂದೆ ಸೇರಿದ್ದರುಾ ಕೂಡ ಮತ್ತು ಅವರು ತಿಪಣ್ಣ ರವರಿಗೆ ಮಾರಾಟ ಮಾಡಿದ ಸಂಗತಿ ಮತ್ತು ಸಾಬಣ್ಣ ತಂದೆ ಕಾಶಪ್ಪ ರವರ ಮೊದಲನೆ ಹೆಂಡತಿ ಮಕ್ಕಳು ಸಹಾಯಕ ಆಯುಕ್ತರ ಕಚೇರಿಯಲ್ಲಿ ಅಪೀಲು ಸಲ್ಲಿಸಿದ ಸಂಗತಿ ಎಲ್ಲಾ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಸಿ ರವರ ನ್ಯಾಯಲಯದ

ಆದೇಶದ ವಿರುದ್ಧ ಅಪೀಲನ್ನು ಯಾವಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇ ಹೇಳಲು ಆಗುವುದಿಲ್ಲ. ನನ್ನ ತಂದೆ ಸುಳ್ಳು ದಾವೆ ಸಲ್ಲಿಸಿದ್ದು ಮತ್ತು ನನಗೆ ಎಲ್ಲಾ ಸಂಗತಿಗಳೂ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮತ್ತು ಸರ್ವೆ ನಂ. 730 ರ ಸ್ವತ್ತು ಸಾಬಣ್ಣ ತಂದೆ ಕಾಶಪ್ಪ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಕಶಪ್ಪರವರ ಮೊದಲನೆ ಹೆಂಡತಿ ಮಕ್ಕಳು ಮತ್ತು ನಾನು ವಾಸವಾಗಿದ್ದ ಮನೆ ಒಂದೇ ಮನೆಯಾಗಿತ್ತು ಇತ್ತಿಚೇಗೆ ಬೇರೆ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**(5 ನೇ ಪ್ರತಿವಾದಿ ಪರ ಶ್ರೀ. BSS ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.